**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ. 830/2010** **ಪ್ರಾ.ಸಾ –4**
**ಚಾ.ಸಾ – 6**

**ದಿನಾಂಕ: 26-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಲಕ್ಷ್ಮಣ.ಎಂ |
| ತಂದೆಯ ಹೆಸರು | : | ಮುನಿರಾಮಯ್ಯ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕೊತ್ರಿಮತೀಘಟ್ಟ, ನಿಟ್ಟೂರು ಹೋಬಳಿ |

**<u>ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u> :-**

ಈ ಪ್ರಕರಣದಲ್ಲಿ ಆರೋಪಿತರ ಪರಿಚಯ ನನಗೆ ಇಲ್ಲ. ಆರೋಪಿತರನ್ನು ನಾನು ನೋಡಿದರೆ ಗುರುತಿಸುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಚಾಸಾ-1 ರಿಂದ 5 ರವರ ಪರಿಚಯ ನನಗೆ ಇಲ್ಲ.

ನನ್ನ ಸಮಕ್ಷಮ ಯಾವುದೇ ಪಂಚನಾಮೆ ಕ್ರಮ ಜರುಗಿಸಿರುವುದಿಲ್ಲ ಹಾಗೂ ನನ್ನ ಸಮಕ್ಷಮ ವಾಹನ ಮತ್ತು ವಸ್ತುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ. ಹೀಗೆ ಸುಮಾರು 13 ವರ್ಷಗಳ ಹಿಂದೆ ನಾನು ತಿಪಟೂರು ಗ್ರಾಮಾಂತರ ಪೊಲೀಸ್ ಠಾಣೆಯ ಬಳಿ ನನ್ನ ವೈಯಕ್ತಿಕ ಕೆಲಸದ ನಿಮಿತ್ತ ಹೋಗಿದ್ದಾಗ ಪೊಲೀಸರು ನನ್ನ ಸಹಿಗಳನ್ನು ಪಡೆದಿರುತ್ತಾರೆ. ಸದರಿ ಸಹಿಗಳನ್ನು ಯಾವ ಕಾರಣಕ್ಕಾಗಿ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಸಾಕ್ಷಿಯು ನಿಪಿ-2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು).***

**<u>ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u> :-**

ದಿಃ 10.06.2007 ರಂದು ರಾತ್ರಿ 3.00 ಗಂಟೆಯಲ್ಲಿ ನಾನು ನಮ್ಮ ತೋಟಕ್ಕೆ ನೀರು ಹಾಯಿಸಿಕೊಂಡು ವಾಪಾಸ್ ಮನೆಗೆ ಹೋಗಲು ಇಸ್ಲಾಂಪುರ ಗೇಟಿನಿಂದ ನಮ್ಮೂರ ಕಡೆಗೆ ಹೋಗಲು ನಡೆದುಕೊಂಡು ಬರುತ್ತಿರುವಾಗ ಇಸ್ಲಾಂಪುರ ಗೇಟಿನ ಬಳಿ ವಿದ್ಯುತ್ ದೀಪದ ಕೆಳಗೆ

ಪೊಲೀಸ್ ಜೀಪ್ ಇದ್ದು ಪೊಲೀಸರು ನನ್ನನ್ನು ಕರೆದಿರುತ್ತಾರೆ. ಆಗ ನಾನು ಬಂದು ನೋಡಿದಾಗ ಒಂದು CKK-2063 ದ್ವಿಚಕ್ರ ವಾಹನ ಹಾಗೂ KA-01-C-1756 ಇಂಡಿಕಾ ಕಾರು ಇತ್ತು ಎಂದರೆ ಸರಿಯಲ್ಲ. ಪೊಲೀಸ್ ಸಬ್ ಇನ್ಸ್ ಪೆಕ್ಟರ್ ರವರು ನನಗೆ ಮತ್ತು ಚಾಸಾ-6 ರವರಿಗೆ ಪೊಲೀಸರ ಬಳಿ ಇದ್ದ 4 ಆಸಾಮಿಗಳನ್ನು ತೋರಿಸಿ ಇವರು ಏನು ಹೇಳುತ್ತಾರೋ, ಏನನ್ನು ತೋರಿಸುತ್ತಾರೋ ಆ ವಸ್ತುಗಳನ್ನು ಅಮಾನತ್ತು ಮಾಡಬೇಕಾಗಿದೆ. ಹಾಗಾಗಿ ನೀವು ಪಂಚರಾಗಿ ಸಹಕರಿಸಿ ಎಂದು ಕೇಳಿಕೊಂಡಿದ್ದು ನಾವಿಬ್ಬರೂ ಒಪ್ಪಿಕೊಂಡಿದ್ದೆವು ಎಂದರೆ ಸರಿಯಲ್ಲ. ನಾವು ಆಸಾಮಿಗಳನ್ನು ವಿಚಾರಿಸಲಾಗಿ ಅವರ ಹೆಸರು ಮಧು ಅಲಿಯಾಸ್ ಸೋಡ, ಯೋಗೀಶ್ ಬಿನ್ ಗಂಗಣ್ಣ, ಬಿ.ಎಸ್.ಪರಮೇಶ್ ಬಿನ್ ಸಿದ್ಧಬಸವಯ್ಯ, ಶಫೀಕ್ ಪಾಷ ಬಿನ್ ಸಯ್ಯದ್ ರಸೂಲ್ ಎಂದು ತಿಳಿದು ಬಂತು ಎಂದರೆ ಸರಿಯಲ್ಲ. ಮೋಟಾರು ಸೈಕಲ್ ಮೇಲಿದ್ದ CPU & Car ನ್ನು ತೋರಿಸಿ ಕಾರಿನಲ್ಲಿ ಮಾನಿಟರ್, ಪ್ರಿಂಟರ್, ಕೀ ಬೋರ್ಡ್, ಮೌಸ್ ಮತ್ತು ಒಂದು ಕಬ್ಬಿಣದ ರಾಡನ್ನು ತೋರಿಸಿ ಇವುಗಳನ್ನು ಈಗ್ಗೆ 14 ದಿನಗಳ ಹಿಂದೆ ರಾತ್ರಿ ವೇಳೆಯಲ್ಲಿ ಬೆಲವತ್ತ ಗ್ರಾಮ ಪಂಚಾಯಿತಿಯಲ್ಲಿ ಕಬ್ಬಿಣದ ರಾಡಿನಿಂದ ಬೀಗ ಹೊಡೆದು ಕಳುವು ಮಾಡಿದ್ದೆವು ಎಂದು ತಿಳಿಸಿದರು ಎಂದರೆ ಸರಿಯಲ್ಲ. ಅವುಗಳನ್ನು ಪೊಲೀಸರು ವಿದ್ಯುತ್ ದೀಪದ ಕೆಳಗೆ ವಿವರವಾಗಿ ಪಂಚನಾಮೆ ಕ್ರಮ ಜರುಗಿಸಿ ಆಸಾಮಿಗಳು ಕಳುವು ಮಾಡಿ ಸಾಗಿಸಲು ಉಪಯೋಗಿಸಿದ್ದ CKK-2063 ದ್ವಿಚಕ್ರ ವಾಹನ ಹಾಗೂ KA-01-C-1756 ಇಂಡಿಕಾ ಕಾರನ್ನು ಪಂಚನಾಮೆ ಮೂಲಕ ಅಮಾನತ್ತುಪಡಿಸಿಕೊಂಡು ಸ್ಥಳದಲ್ಲೇ ಪಂಚನಾಮೆಯನ್ನು ತಯಾರಿಸಿ ನಮ್ಮ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆಮಾಲನ್ನು ನೋಡಿ ಗುರುತಿಸಿರುವುದಿಲ್ಲ. ಪಂಚನಾಮೆಯನ್ನು ಬೆಳಿಗ್ಗೆ 3-00 ಗಂಟೆಯಿಂದ 4-00 ಗಂಟೆಯವರೆಗೆ ಮಾಡಲಾಯಿತು ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ "ನಾನು ಮೇಲ್ಕಂಡ ................................. ನೋಡಿದರೆ ಗುರುತಿಸುತ್ತೇನೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು.

ಸಾಕ್ಷಿಯೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲು : ಆರೋಪಿ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**